## ನಕ್ಕುಬಿಡಿ




ಸಕಲಂ ಆನ್‌ಲೈನ್‌ಮಯಂ...

### ತೂಕ

ಡಾಕ್ಟರ್: ಎರಡು ಕೆ.ಜಿ. ಬಾಳೆಹಣ್ಣು ಒಂದೇ ದಿನ ತಿಂದ್ರೆ ತೂಕ ಜಾಸ್ತಿ ಆಗ್ದೆ ಇನ್ನೇನು ಆಗುತ್ತೆ. ಮೊದಲು ತೂಕ ಕಮ್ಮಿ ಮಾಡ್ರಿ.
ಪೇಶೆಂಟ್: ಹಾಗಾದ್ರೆ ಒಂದು ದಿನಕ್ಕೆ ಒಂದು ಕೆ.ಜಿ. ಬಾಳೆಹಣ್ಣು ತಿನ್ಲಾ ಸಾರ್!

***

### ಸುಸ್ತು

ಲೇಡಿ: ಡಾಕ್ಟ್ರೇ ಜಯನಗರಕ್ಕೆ ಹೋಗಿ ಬಂದ್ರೆ ಸುಸ್ತಾಗಲ್ಲ. ಮನೆಲಿರೋ ಲೀವಿಂಗ್ ರೂಮ್‌ನಿಂದ ಬೆಡ್ ರೂಮ್‌ಗೆ ನಡೆದುಕೊಂಡು ಹೋದ್ರೆ ತುಂಬಾ ಸುಸ್ತಾಗತ್ತೆ.
ಡಾಕ್ಟರ್: ಜಯನಗರಕ್ಕೆ ಹೇಗೆ ಹೋಗ್ತೀರಾ?
ಲೇಡಿ: ಕಾರ್‌ನಲ್ಲಿ ಸಾರ್!

***

### ರಜಾ

ಅಪ್ಪ: ಇವತ್ತು ಭಾನುವಾರ. ರಜಾ ಅನ್ನೋ ಕಾರಣಕ್ಕೆ ಪಾರ್ಕ್‌ಗೆ ಕರೆದುಕೊಂಡು ಬಂದ್ರೆ ನಿಮ್ ಅಮ್ಮ ಏನೋ, 'ಮನೆ ಬಾಗಿಲು ಹಾಕಿದಿನೊ ಇಲ್ವೊ. ಕಳ್ಳ ಬಂದ್ರೆ ಏನ್ ಗತಿ' ಅಂತ ಯೋಚನೆ ಮಾಡ್ತಾ ಕುಳಿತ್ತಿದ್ದಾಳೆ.
ಮಗ: ಇವತ್ತು ಭಾನುವಾರ ಕಳ್ಳನಿಗೂ ರಜಾ ಅಂತ ಅಮ್ಮನಿಗೆ ಗೊತ್ತಿಲ್ವೇನೊ ಪಾಪ.

***

### ಮೊಬೈಲ್

ಅಮ್ಮ: ಯಾಕೋ ಕಾಲಲ್ಲಿ ಮೊಬೈಲ್ ಸ್ವೈಪ್ ಮಾಡ್ತಿದ್ದಿಯಾ?
ಮಗ: ನೀನೇ ಮೊಬೈಲ್ ಮುಟ್ಟಿದ್ರೆ ಕೈ ಕತ್ತರಿಸುತ್ತೀನಿ ಅಂದ್ಯಲ್ಲಮ್ಮ!

***

### ಒಡವೆ

ಮಂತ್ರಿ ಹೆಂಡ್ತಿ: ಏನ್ರಿ ನಮ್ಮ ಮನೇಲಿ ಚೆಕ್ ಮಾಡ್ದಾಗ 55 ಕೆ.ಜಿ. ಇದ್ದೆ. ಇಲ್ಲಿ ನೋಡಿದ್ರೆ 65 ಕೆ.ಜಿ. ತೋರಿಸ್ತಿದೆ. ಮಷಿನ್ ಕೆಟ್ಟು ಹೋಗಿದ್ಯಲ್ರೀ?
ಮಾಲೀಕ: ಮನೇಲಿರೊ ಮಷಿನ್ ನಿಮ್ಮ ತೂಕ ಮಾತ್ರ ತೋರ್ಸಿದೆ. ನಮ್ಮ ಮಷಿನ್ ಒಡವೆ ಸಮೇತ ನಿಮ್ಮ ತೂಕ ತೋರಿಸ್ತಿದೆ ಅಷ್ಟೇ ಮೇಡಂ!

***

### ಸಾಕ್ಷಿ

ನ್ಯಾಯಾಧೀಶರು: ಒಂದು ವರ್ಷದಿಂದ ನಾಳೆ ಬಲವಾದ ಸಾಕ್ಷಿನ ಕರೆದುಕೊಂಡು ಬಂದೇ ಬರುತ್ತೀನಿ ಅಂತಿದ್ದೀರಲ್ಲಾ ಎಲ್ರೀ ಸಾಕ್ಷಿ?
ಲಾಯರ್: 7 ತಿಂಗಳಲ್ಲೆ ಡೆಲಿವರಿ ಪೇನ್ ಬಂದು ಆಸ್ಪತ್ರೆಗೆ ಹೋದ್ರು, ಬರೋದಿಕ್ಕೆ ಇನ್ನು 6 ತಿಂಗಳು ಆಗುತ್ತೆ ಸಾರ್!

***

### ರೆಸಿಗ್ನೇಷನ್

ಕೆಲಸಗಾರ: ನನ್ನ ಹೆಂಡ್ತಿಗೆ ತುಂಬಾನೇ ಹುಷಾರಿಲ್ಲ. ಅವಳನ್ನು ಕೆಲಸಕ್ಕೆ ಬಿಡೋದು ಕರೆದುಕೊಂಡು ಬರೋದು ಮಾಡಬೇಕು. ಅದ್ಕೆ ಕೆಲಸ ಬಿಡುತ್ತಿದ್ದೀನಿ ದಯವಿಟ್ಟು ರೆಸಿಗ್ನೇಷನ್ ಬೇಗ ಅಕ್ಸೆಪ್ಟ್ ಮಾಡಿ ಸಾರ್.
ಬಾಸ್: ಅಲ್ರಿ ನಿಮ್ಮ ಹೆಂಡ್ತಿಗೆ ಹುಷಾರಿಲ್ಲ ಅಂದ್ರೆ ಅವ್ರು ಕೆಲಸ ಬಿಡಬೇಕು ಅದುಬಿಟ್ಟು ನೀವ್ಯಾಕ್ರೀ ಕೆಲಸ ಬಿಡೋದು?
ಕೆಲಸಗಾರ: ಅಯ್ಯೋ ಸರ್. ಅವ್ರು ಕೆಲಸಕ್ಕೆ ಹೋಗ್ದೆ ಮನೇಲಿದ್ರೆ ಖರ್ಚ್ ಜಾಸ್ತಿ.

***

### ಸಂಗೀತ

ಸೊಸೆ: ಈ ತರ ಹೇಳ್ಕೊಟ್ರೆ ಸಂಗೀತ ಅಂದ್ರೆನೆ ಭಯ ಪಟ್ಕೊಳ್ತಾಳೆ ನನ್ನ ಮಗಳು.
ಅತ್ತೆ: ಅದ್ಕೆ ಈ ತರ ಸಂಗೀತ ಹಾಡಬಾರದು ಅಂತ ಹೇಳ್ಕೊಡ್ತಾ ಇದ್ದೀನಿ ನನ್ನ ಮೊಮ್ಮಗಳಿಗೆ.

–(ಸಂಗ್ರಹ) ಬಿ. ಆರ್. ಉಷಾ, ಬೆಂಗಳೂರು


SANDHILIN ಸನ್ಧಿಲಿನ
ಸಂಧಿಲಿನ್
ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ
ಹೇಳಿ!
ಶೀಘ್ರ ಪರಿಣಾಮಕಾರಿ




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ